# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.61-2013** **ಡಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಶ್ರಿಕಂಠ ಮೂರ್ತಿ<br>ಲೇ.ನಾಗಣ್ಣಶೆಟ್ಟಿ<br>63 ವರ್ಷ<br>ವ್ಯವಸಾಯ<br>ಕೂಗಲೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 04-04-2025. |

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಆರ್. ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ವಾದಿ ಪರ ಶ್ರೀ ಬಿ.ವೈ ವಕೀಲರಿಂದಃ-**

ನನಗೆ ಪ್ರತಿವಾದಿ ಬಸವರಾಜು ರವರು ಸುಮಾರು 20 ವರ್ಷಗಳಿಂದ ಪರಿಚಯ. ಪ್ರತಿವಾದಿ ನನ್ನ ಪಕ್ಕದ ಗ್ರಾಮದವರಾಗಿರುತ್ತಾರೆ. ನಾನು ಮೈಸೂರು ನ್ಯಾಯಾಲಯದಲ್ಲಿ ಪ್ರತಿವಾದಿ ವಿರುದ್ಧ ಕೇಸು ದಾಖಲು ಮಾಡಿದ್ದು ಅದು ರಾಜಿ ಆಗಿರುತ್ತದೆ ಎಂದರೆ ಸರಿ. ನಾನು ಪ್ರತಿವಾದಿಯ ವಿರುದ್ಧ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿ. ರಾಜೀ ಪ್ರಕಾರ

ಪ್ರತಿವಾದಿ ನಡೆದುಕೊಳ್ಳದೇ ಇದ್ದುದ್ದರಿಂದ ನಾನು ಆತನ ವಿರುದ್ಧ ಜಾರಿ ಕೇಸನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ.

2. ವಾದಿ ಮತ್ತು ಪ್ರತಿವಾದಿಯ ನಡುವೆ ಹಣಕಾಸಿನ ವ್ಯವಹಾರದ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು,ಆ ಸಂಬಂಧ ರೂ.1,00,000/- ಗಳಿಗೆ ತೀರ್ಮಾನವಾಗಿ ಸದರಿ ಮೊಬಲಗಿನ ಪೈಕಿ ರೂ.85,000/-ಗಳನ್ನು ಪ್ರತಿವಾದಿ ವಾದಿಗೆ ನೀಡಿದ್ದು, ಉಳಿದ ರೂ.15,000/- ಗಳ ಬಾಬ್ತು ಚೆಕ್ಕನ್ನು ನೀಡಿರುತ್ತಾರೆ. ಈ ಸಂಬಂಧ ಯಾವುದೇ ದಾಖಲಾತಿ ಆಗಿರುವುದಿಲ್ಲ. ಈ ದಾವಾವು ಎಷ್ಟು ವರ್ಷಗಳಿಂದ ನಡೆಯುತ್ತಿದೆ ಎಂದು ನನಗೆ ಗೊತ್ತಿಲ್ಲ. ಆದರೆ ವಾದಿ ಮತ್ತು ಪ್ರತಿವಾದಿಯವರ ನಡುವೆ ತೀರ್ಮಾನ ವಾದ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವಂತೆ ಈ ದಾವೆಯ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ಹಣದ ಭದ್ರತೆಗಾಗಿ ಬರೆದುಕೊಟ್ಟಿದ್ದ ಕ್ರಯದ ಕರಾರಿಗೆ ಸಂಬಂಧಿಸಿದಂತೆ ದಾವೆ ನಡೆಯುತ್ತಿರುವುದಾಗಿ ಪ್ರತಿವಾದಿ ನನಗೆ ತಿಳಿಸಿದ್ದು, ನನಗೆ ಕೇವಲ ನನ್ನ ಸಮಕ್ಷಮ ತೀರ್ಮಾನವಾದ ವಿಚಾರ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ವಾದಿ ಹಣದ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದರು ಎಂಬ ವಿಚಾರವನ್ನು ತಿಳಿಸಿರುವುದಿಲ್ಲ. ನಾನು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರನಾಗಿ

ಸಹಿ ಮಾಡಿರುವುದಿಲ್ಲ. ನಾನು ಹೇಳುವಂತೆ ದಿ.13-09-2017 ರಂದು ರೂ.1,00,000/- ಗಳಿಗೆ ತೀರ್ಮಾನವಾಗಿ ಅದರ ಬಾಬ್ತು ಪ್ರತಿವಾದಿ ರೂ.85,000/- ನಗದಾಗಿ, ಉಳಿಕೆ ರೂ.15,000/- ಗಳಿಗೆ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ಯಾವ ದಿನಾಂಕವನ್ನು ನಮೂದು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವಾದಲ್ಲಿ ಸಾಕ್ಷಿದಾರನಾಗಿ ಸಾಕ್ಷಿ ನುಡಿಯದೇ ಇದ್ದ ಪಕ್ಷದಲ್ಲಿ, ನಾನು ಪ್ರತಿವಾದಿಯ ವಿರುದ್ಧ ಮೈಸೂರು ನ್ಯಾಯಾಲಯದಲ್ಲಿ ಸಲ್ಲಿಸಿರುವ ಜಾರಿ ಕೇಸಿನಲ್ಲಿ ಹಣ ಪಾವತಿಸುವುದಿಲ್ಲವೆಂದು ಪ್ರತಿವಾದಿಯೂ ಹೆದರಿಸಿದ ಮೇರೆಗೆ ನಾನು ಈ ದಾವಾದಲ್ಲಿ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**